# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-2045/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/03/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ದೂರುದಾರರಿಗೆ ನಿಯಮಾನುಸಾರ ಸ್ವಯಂ ಚಾಲಿತ ತ್ರಿಚಕ್ರ ವಾಹನವನ್ನು ಒದಗಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಮುದ್ದಣ್ಣ ಬಿನ್ ಲೇಟ್ ಸಣ್ಣ ತಿಮ್ಮಣ್ಣ, ಬೆಲ್ಲದಮಡಗು, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಸಹಾಯಕ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ತುಮಕೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತಾನು ಚಾಲನಾ ಪರವಾನಗಿ ಪತ್ರ ಹೊಂದಿದ್ದು, ಅಂಗವಿಕಲತೆ ದೃಢೀಕರಣ ಪತ್ರ ಹೊಂದಿದ್ದು, ಮಾಶಾಸನ ಪಡೆಯುತ್ತಿದ್ದು ಈ ಬಗ್ಗೆ ಎದುರುದಾರರು ದ್ವಿಚಕ್ರ ವಾಹನ ಕೊಡಲು ಅರ್ಜಿ ಆಹ್ವಾನಿಸಿದ್ದರು, ತಾನು ಆನ್‌ಲೈನ್ ಮೂಲಕ ಸಕಲ ದಾಖಲೆಯೊಂದಿಗೆ ಅರ್ಜಿ ನೀಡಿದ್ದೇನೆ. ಆದರೆ, ಇಲ್ಲಿಯವರೆಗೆ ತನಗೆ ದ್ವಿಚಕ್ರ ವಾಹನ ನೀಡಿಲ್ಲ, ಆದ್ದರಿಂದ, ಕೊಡಿಸಿಕೊಡಬೇಕೆಂದು ಕೋರಿದ್ದಾರೆ.

3. ಎದುರುದಾರರಿಗೆ ಆಕ್ಷೇಪಣೆ ಸಲ್ಲಿಸುವಂತೆ ಪತ್ರ ಬರೆದು ತಿಳಿಸಲಾಗಿತ್ತು. ಆದರೆ, ನಿಗದಿತ ಸಮಯದಲ್ಲಿ ಎದುರುದಾರರು ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ, ಪುನ: ನೆನಪೋಲೆ ನೀಡಿ

ಆಕ್ಷೇಪಣೆ ಕೋರಿ ಸಮಯ ನೀಡಿದ್ದರೂ ಸಹಿತ ಆಕ್ಷೇಪಣೆ ನೀಡಿರುವುದಿಲ್ಲ. ಆದ್ದರಿಂದ, ಕಡತವನ್ನು ಅಂತಿಮ ಟಿಪ್ಪಣಿಗಾಗಿ ಪೋಸ್ಟ್ ಮಾಡಲಾಗಿದೆ.

4. ದೂರುದಾರರು ಹಾಜರುಪಡಿಸಿರುವ ದಿನಾಂಕ: 15/02/2018ರ ಉಪ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ರವರ ಪತ್ರವನ್ನು ಪರಿಶೀಲಿಸಿದಾಗ, ಅವರು ಎದುರುದಾರರಿಗೆ ಸದರಿ ಪತ್ರವನ್ನು ಬರೆದಿರುತ್ತಾರೆ ಮತ್ತು ನಿಯಮಾನುಸಾರ ವಿಕಲಚೇತನರಿಗೆ ಇಲಾಖೆಯ ಯೋಜನೆಯ ಸೌಲಭ್ಯಗಳನ್ನು ದೊರಕಿಸಿಕೊಡಲು ಕ್ರಮ ವಹಿಸುವಂತೆ ತಿಳಿಸಿದ್ದಾರೆ. ಸದರಿ ಪತ್ರವನ್ನು ಕ್ರಮ ಸಂಖ್ಯೆ: 2 ಶ್ರೀ ಮುದ್ದಣ್ಣ ಬಿನ್ ಲೇಟ್ ತಿಮ್ಮಣ್ಣ, ಬೆಲ್ಲದಮೊಡಗು, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು ಇವರು ಯಂತ್ರ ಚಾಲಿತ ದ್ವಿಚಕ್ರ ವಾಹನವನ್ನು ಕೋರಿದ್ದಾರೆ ಎಂದು ಕಂಡುಬರುತ್ತದೆ. ಆದರೆ, ದೂರುದಾರರು ಪ್ರಪತ್ರ 1ನ್ನು ಪರಿಶೀಲಿಸಿದಾಗ ಆತನ ತಂದೆಯ ಹೆಸರು ಲೇಟ್ ಸಣ್ಣತಿಮ್ಮಣ್ಣ ಎಂದು ಉಲ್ಲೇಖಿಸಿದ್ದಾರೆ ಮತ್ತು ತ್ರಿಚಕ್ರ ವಾಹನಕ್ಕಾಗಿ ಅರ್ಜಿ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ. ಆದರೆ, ಅವರು ಹಾಜರುಪಡಿಸಿರುವ ಉಪ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ರವರ ಪತ್ರದಲ್ಲಿ ತಂದೆಯ ಹೆಸರು, ಕೋರಿರುವ ವಾಹನ ವ್ಯತ್ಯಾಸ ಇರುತ್ತದೆ. ದೂರುದಾರರು ತನಗೆ ಚಾಲನ ಪರವಾನಗಿ ಪತ್ರ ಇದೆಯೆಂದು ತಿಳಿಸಿದ್ದು, ಸದರಿ ದಾಖಲೆಯನ್ನು ಹಾಜರುಪಡಿಸಿಲ್ಲ.

5. ದೂರುದಾರರಿಗೆ ಎದುರುದಾರರಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಹಾಗೂ ಸಲ್ಲಿಸಿದ ದಾಖಲೆಗಳ ಪ್ರತಿಗಳನ್ನು ಹಾಗೂ ಚಾಲನಾ ಪರವಾನಗಿ ಪತ್ರದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಹಾಜರುಪಡಿಸುವಂತೆ ತಿಳಿಸಲಾಗಿತ್ತು.

6. ದೂರುದಾರರು ದಿನಾಂಕ: 16/10/2019 ರಂದು ಪತ್ರ ಬರೆದು ಅದರಲ್ಲಿ ತಾನು ತ್ರಿಚಕ್ರ ವಾಹನ ಕೋರಿ ಜಿಲ್ಲಾ ವ್ಯವಸ್ಥಾಪಕರಲ್ಲಿ ನಿಯಮಾನುಸಾರವಾಗಿ ತಾನು ದಾಖಲೆಗಳನ್ನು ಸಲ್ಲಿಸಿದ್ದರೂ ಸಹಾ ಅವರು ಸಹಕಾರವನ್ನು ನೀಡದೇ ಮಳೆಯ ನೀರು ಆಫೀಸ್‌ಗೆ ನುಗ್ಗಿ ಕಡತ ನಾಶವಾಗಿರುವುದರಿಂದ, ಮಗದೊಮ್ಮೆ ದಾಖಲಾತಿ ಸಲ್ಲಿಸಿ ಅಂತಾ ತಿಳಿಸಿದ ಮೇರೆಗೆ ಮತ್ತೊಮ್ಮೆ ದಾಖಲೆಗಳನ್ನು ಸಲ್ಲಿಸಿದ್ದರೂ ಸಹಿತ ತನಗೆ ತ್ರಿಚಕ್ರ ವಾಹನ ನೀಡಿಲ್ಲ ಅಂತಾ ಉಲ್ಲೇಖಿಸಿ ಶಾಲಾ ಪರವಾನಗಿ ಪತ್ರ, ದಿನಾಂಕ: 08/02/2019 ರಂದು ತುಮಕೂರು ಜಿಲ್ಲಾ ಅಂಗವಿಕಲರ ಅಭಿವೃದ್ಧಿ ಇಲಾಖೆ, ತುಮಕೂರು ರವರಿಗೆ

ಸ್ವಯಂ ಚಾಲಿತ ತ್ರಿಚಕ್ರ ವಾಹನ ಕೋರಿ ಸಲ್ಲಿಸಿದ ಮನವಿ ಪತ್ರದ ಸ್ವೀಕೃತಿ ಪ್ರತಿ, ವೈದ್ಯಕೀಯ ಪ್ರಮಾಣ ಪತ್ರದ ಪ್ರತಿ, ವಾಸ ಸ್ಥಳದ ದೃಢೀಕರಣ ಪತ್ರದ ಪ್ರತಿ, ಆಧಾಯ ಮತ್ತು ಜಾತಿ ಪ್ರಮಾಣ ಪತ್ರದ ಪ್ರತಿ, ಜಿಲ್ಲಾ ಆಸ್ಪತ್ರೆ ತುಮಕೂರು ರವರಿಂದ ಅಂಗವಿಕಲತೆಯ ಪತ್ರ, ಆಧಾರ್ ಕಾರ್ಡ್‌ನ ಪ್ರತಿ, ಪಡಿತರ ಚೀಟಿಯ ಪ್ರತಿ, ಭಾರತ ಚುನಾವಣಾ ಆಯೋಗದವರು ನೀಡಿದ ಗುರುತಿನ ಚೀಟಿಯ ಪ್ರತಿ, ದಿನಾಂಕ: 09/01/2019 ರಂದು ಶ್ರೀ ವೀರಭದ್ರಯ್ಯ, ಶಾಸಕರು, ಮಧುಗಿರಿ ವಿಧಾನ ಸಭಾ ಕ್ಷೇತ್ರ ರವರು ಜಿಲ್ಲಾ ವ್ಯವಸ್ಥಾಪಕರು ತುಮಕೂರು ಜಿಲ್ಲಾ ವಿಕಲಚೇತನ ಅಭಿವೃದ್ಧಿ ಕಲ್ಯಾಣ ಇಲಾಖೆ, ತುಮಕೂರು ರವರಿಗೆ ಈ ದೂರುದಾರರಿಗೆ ಸ್ವಯಂ ಚಾಲಿತ ತ್ರಿಚಕ್ರ ವಾಹನ ನೀಡುವಂತೆ ಅನುಕೂಲ ಕಲ್ಪಿಸುವಂತೆ ಮಾಡಿರುವ ಶಿಫಾರಸ್ಸು ಪತ್ರ ಸಲ್ಲಿಸಿದ್ದಾರೆ.

7. ದೂರುದಾರರು ಸಲ್ಲಿಸಿದ ದಾಖಲೆಗಳಿಂದ ಕಂಡುಬರುವುದೇನೆಂದರೇ, ದೂರುದಾರರು ಪ್ರಾದೇಶಿಕ ಸಾರಿಗೆ ಕಛೇರಿ, ಮಧುಗಿರಿ ರವರಿಂದ ಶಾಲಾ ಪ್ರಮಾಣ ಪತ್ರವನ್ನು ಪಡೆದಿದ್ದು, ಅದು ಡಿ.ಎಲ್. ನಂ. ಕೆಎ64 2017 7000 1694 ಆಗಿದ್ದು, ಅದು ದಿನಾಂಕ: 21/03/2022 ರವರೆಗೆ ಮಾನ್ಯತೆ ಹೊಂದಿದೆ ಕಂಡುಬರುತ್ತದೆ. ದಿನಾಂಕ: 20/08/2019 ರಂದು ಸಾರ್ವಜನಿಕ ಆಸ್ಪತ್ರೆ ಮಧುಗಿರಿ ರವರು ನೀಡಿರುವ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ, ದೂರುದಾರರು ಶೇಕಡ 75% ರಷ್ಟು ಅಂಗವಿಕಲತೆ ಹೊಂದಿದ್ದಾರೆಂದು ಕಂಡುಬರುತ್ತದೆ. ಕಾರ್ಯದರ್ಶಿ, ದಬ್ಬೆಘಟ್ಟ ಗ್ರಾಮ ಪಂಚಾಯತ್ ರವರು ದಿನಾಂಕ: 11/07/2017 ರಂದು ಅಂಗವಿಕಲ ಚಾಲಿತ ಯಂತ್ರ ಪಡೆಯುವ ಉದ್ದೇಶಕ್ಕಾಗಿ ವಾಸ ಸ್ಥಳ ದೃಢೀಕರಣ ಪತ್ರ ನೀಡಿದ್ದಾರೆ ಅಂತಾ ಕಂಡುಬರುತ್ತದೆ. ದಿನಾಂಕ: 04/06/2010 ರಂದು ಜಿಲ್ಲಾ ಆಸ್ಪತ್ರೆ ತುಮಕೂರು ರವರು ನೀಡಿರುವ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ, ದೂರುದಾರರು ಶೇಕಡ 75% ರಷ್ಟು ಅಂಗವಿಕಲತೆ ಹೊಂದಿದ್ದಾರೆಂದು ಕಂಡುಬರುತ್ತದೆ.

8. ದೂರುದಾರರು ಸಲ್ಲಿಸಿರುವ ಎಲ್ಲಾ ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬರುವುದೇನೆಂದರೇ, ದೂರುದಾರರು ಎದುರುದಾರರು ಇಲಾಖೆಯಿಂದ ಸರ್ಕಾರದ ವತಿಯಿಂದ ನೀಡುವ ಸ್ವಯಂ ಚಾಲಿತ ತ್ರಿಚಕ್ರ ವಾಹನ ಪಡೆಯುವ ಅರ್ಹ ವ್ಯಕ್ತಿಯಾಗಿದ್ದಾರೆ, ಆದರೂ ಸಹಿತ ಎದುರುದಾರರು ಅವರಿಗೆ ಸ್ವಯಂ ಚಾಲಿತ ತ್ರಿಚಕ್ರ ವಾಹನ ನೀಡದೇ ವಿಳಂಬ ದೋರಣೆ ಅನುಸರಿಸುತ್ತಿದ್ದಾರೆ ಎನ್ನುವ ದೂರುದಾರರು ಆಪಾದನೆಯನ್ನು ನಿರಾಕರಿಸುವಂತಹ ಯಾವುದೇ ಸಾಕ್ಷ್ಯಾದಾರಗಳು ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಏಕೆಂದರೆ, ಎದುರುದಾರರು ತಮ್ಮ ಆಕ್ಷೇಪಣೆಗಳನ್ನೇ ಸಲ್ಲಿಸಿರುವುದಿಲ್ಲ.

9. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ದೂರುದಾರರಿಗೆ ನಿಯಮಾನುಸಾರ ಸ್ವಯಂ ಚಾಲಿತ ತ್ರಿಚಕ್ರ ವಾಹನವನ್ನು ಒದಗಿಸುವಂತೆ ನಿರ್ದೇಶಿಸಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/6/20

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**